# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 259 |
| ವಿಧಾನ ಪರಿಷತ್ತು ಸದಸ್ಯರ ಹೆಸರು | : | ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 02.02.2021 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಸರ್ಕಾರವು ಜನ ವಸತಿ ಪ್ರದೇಶದಿಂದ ದೂರ ಇರುವ ಗ್ರಾಮೀಣ ತಾಂಡ ಪ್ರದೇಶಗಳಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಉದ್ದೇಶಿಸಲಾಗಿದೆಯೇ; ಹಾಗಿದ್ದಲ್ಲಿ, ಎಷ್ಟು ತಾಂಡ ಪ್ರದೇಶಗಳನ್ನು ಗುರುತಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ಸಾರ್ವಜನಿಕ ವಿತರಣಾ ಪದ್ಧತಿ ನಿಯಂತ್ರಣ ಆದೇಶ 2016ರ ಕಲಂ 11 ರಲ್ಲಿ ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ನ್ಯಾಯಬೆಲೆ ಅಂಗಡಿಗಳಿಗೆ ನಿಯೋಜಿಸಬೇಕಾದ ಕನಿಷ್ಠ ಪಡಿತರ ಚೀಟಿಗಳ ಸಂಖ್ಯೆಯನ್ನು ನಿಗಧಿಪಡಿಸಲಾಗಿದ್ದು, ಅದರಂತೆ ಗ್ರಾಮಾಂತರ ಪ್ರದೇಶದಲ್ಲಿ ಒಂದು ನ್ಯಾಯಬೆಲೆ ಅಂಗಡಿಗೆ ಕನಿಷ್ಠ 500 ಪಡಿತರ ಚೀಟಿಗಳನ್ನು ನಿಯೋಜಿಸಬೇಕಾಗಿರುತ್ತದೆ. ನ್ಯಾಯಬೆಲೆ ಅಂಗಡಿ ಮಂಜೂರು ಮಾಡುವ ಅಧಿಕೃತ ಪ್ರಾಧಿಕಾರಿಯು ಗ್ರಾಮಾಂತರ ಪ್ರದೇಶದ ನಿರ್ಜನ ವಸತಿ ಪ್ರದೇಶ, ವಿಶೇಷ ಪ್ರದೇಶಗಳಾದ ಬುಡಕಟ್ಟು, ಹಾಂಡಿ, ತಾಂಡಾ, ಗೊಲ್ಲರಹಟ್ಟಿ ಇತ್ಯಾದಿಗಳಿಗೆ ನ್ಯಾಯಬೆಲೆ ಅಂಗಡಿ ನೀಡುವ ಸಂದರ್ಭದಲ್ಲಿ ಮೇಲೆ ವಿವರಿಸಿದ ಮಿತಿಯನ್ನು 100 ಪಡಿತರ ಚೀಟಿಗಳಿಗೆ ಸಡಿಲಿಸಲು ಅವಕಾಶ ಕಲ್ಪಿಸಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ. |
| ಆ | ಈ ರೀತಿ ತಾಂಡ ಪ್ರದೇಶಗಳಲ್ಲಿ ಪರವಾನಿಗೆ ನೀಡುವ ಒಂದು ನ್ಯಾಯಬೆಲೆ ಅಂಗಡಿಗೆ ಎಷ್ಟು ರೇಷನ್ ಕಾರ್ಡ್‌ಗಳಿಗೆ ಆಹಾರ ಧಾನ್ಯ ಒದಗಿಸಲು ಅವಕಾಶ ಕಲ್ಪಿಸಲಾಗುವುದು; | ಗ್ರಾಮಾಂತರ ಪ್ರದೇಶಗಳಲ್ಲಿ ಹೊಸ ನ್ಯಾಯಬೆಲೆ ಅಂಗಡಿ ತೆರೆಯಲು ಕನಿಷ್ಟ 500 ಪಡಿತರ ಚೀಟಿಗಳನ್ನು ನಿಗಧಿಪಡಿಸಲಾಗಿದೆ. ಗ್ರಾಮಾಂತರ ಪ್ರದೇಶದ ನಿರ್ಜನ ವಸತಿ ಪ್ರದೇಶ, ವಿಶೇಷ ಪ್ರದೇಶಗಳಾದ ಬುಡಕಟ್ಟು, ಹಾಂಡಿ, ತಾಂಡಾ, ಗೊಲ್ಲರಹಟ್ಟಿ ಇತ್ಯಾದಿಗಳಿಗೆ ನ್ಯಾಯಬೆಲೆ ಅಂಗಡಿ ನೀಡುವ ಸಂದರ್ಭದಲ್ಲಿ ಮೇಲೆ ವಿವರಿಸಿದ ಮಿತಿಯನ್ನು 100 ಪಡಿತರ ಚೀಟಿಗಳಿಗೆ ಸಡಿಲಿಸಲು ಅವಕಾಶ ಕಲ್ಪಿಸಲಾಗಿದೆ. |
| ಇ | ಈ ತಾಂಡ ಪ್ರದೇಶಗಳಲ್ಲಿ ಪರವಾನಿಗೆ ಪಡೆಯಲು ಇರುವ ವಿಶೇಷ ಮಾನದಂಡಗಳೇನು? (ಸಂಪೂರ್ಣ ವಿವರ ನೀಡುವುದು) | ಕರ್ನಾಟಕ ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣಾ ಪದ್ಧತಿ (ನಿಯಂತ್ರಣ) ಆದೇಶ 2016 ರ ಕಲಂ 6 ಮತ್ತು ಇದಕ್ಕೆ ಅಳವಡಿಸಿದ ತಿದ್ದುಪಡಿ ಆದೇಶ ಸಂಖ್ಯೆ: ಎಫ್ ಸಿ ಎಸ್ 17 ಆರ್ ಪಿ ಆರ್ 2011(1), ದಿನಾಂಕ 21-05-2018 ಮತ್ತು ತಿದ್ದುಪಡಿ ಆದೇಶ ಸಂಖ್ಯೆ: ಎಫ್ ಸಿ ಎಸ್ 100 ಆರ್ ಪಿ ಆರ್ 2019 (ಇ-ಆಫೀಸ್), ದಿನಾಂಕ 18-12-2020ರ ಆದೇಶಗಳಲ್ಲಿ ನ್ಯಾಯಬೆಲೆ |

ಅಂಗಡಿ ಮಂಜೂರಾತಿಗೆ ಕೆಳಕಂಡ ಆದ್ಯತೆಯನ್ನು ನಿಗಧಿಪಡಿಸಲಾಗಿದ್ದು, ಅದರಂತೆ ನ್ಯಾಯಬೆಲೆ ಅಂಗಡಿ ಮಂಜೂರಾತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಎ) ಸರ್ಕಾರದ ನಿಗಮಗಳು/ಗ್ರಾಮ ಪಂಚಾಯಿತಿ/ಸ್ಥಳೀಯ ನಗರ ಸಂಸ್ಥೆಗಳು

ಬಿ) ಸಹಕಾರ ಸಂಘಗಳು.

1. ಟಿಎಪಿಸಿಎಂಎಸ್/ಕೋ-/ಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿಗಳು.
2. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು/ ವಿ.ಎಸ್.ಎಸ್.ಎನ್
3. ಹಾಫ್ ಕಾಮ್ಸ್
4. ಅಧಿಕೃತ ನೋಂದಣಿಯಾದ ಸಹಕಾರ ಸಂಘಗಳು
5. ಅಧಿಕೃತ ನೋಂದಣಿಯಾದ ಪ್ರಾಥಮಿಕ ಬಳಕೆದಾರರ ಸಹಕಾರ ಸಂಘಗಳು
6. ನೋಂದಣಿಯಾದ ಆದಿವಾಸಿ ವಿವಿದ್ದೋದ್ದೇಶ ಸಹಕಾರ ಸಂಘಗಳು.
7. ನೋಂದಣಿಯಾದ ನೇಕಾರರ ಸಹಕಾರ ಸಂಘಗಳು
8. ನೋಂದಣಿಯಾದ ಮಹಿಳಾ ವಿವಿದ್ದೋದ್ದೇಶ ಸಹಕಾರ ಸಂಘಗಳು .
9. ನೋಂದಣಿಯಾದ ವಿವಿದ್ದೋದ್ದೇಶ ಸಹಕಾರ ಸಂಘಗಳು
10. ಅಂಗವಿಕಲ ಕಲ್ಯಾಣ ಸಹಕಾರ ಸಂಘಗಳು
11. ಸಹಕಾರ ಸಂಘಗಳು ನಡೆಸುವ ಬ್ಯಾಂಕ್ ಅಥವಾ ಕೋ-ಆಪರೇಟಿವ್ ಬ್ಯಾಂಕುಗಳು.
12. ನ್ಯಾಯಬೆಲೆ ಅಂಗಡಿ ಮಂಜೂರು ಮಾಡುವ ಗ್ರಾಮ ಅಥವಾ ಸ್ಥಳ (locality) ದಲ್ಲಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರದಿಂದ ಗುರುತಿಸಲ್ಪಟ್ಟ ಸ್ತ್ರೀ ಶಕ್ತಿ ಗುಂಪು ಮತ್ತು ಮಹಿಳಾ ಸ್ವ ಸಹಾಯ ಗುಂಪುಗಳು. ಅರ್ಜಿ ಸಲ್ಲಿಸುವ ದಿನಾಂಕಕ್ಕೆ 3 ವರ್ಷಗಳಿಗೆ ಕಡಿಮೆ ಅಲ್ಲದ ಅವಧಿಗೆ ಅಸ್ತಿತ್ವದಲ್ಲಿದ್ದು, ಸಂಪೂರ್ಣ ಒಂದು ವರ್ಷದ ಅವಧಿಗೆ 1 ಲಕ್ಷ ರೂ.ಗಳ ಕನಿಷ್ಠ ಬ್ಯಾಂಕ್ ಬ್ಯಾಲೆನ್ಸ್ ಹೊಂದಿದ್ದು ಆಯುಕ್ತರಿಂದ ಆಗಿಂದಾಗ್ಗೆ ನೀಡಲಾಗುವ ಎಲ್ಲಾ ಹೆಚ್ಚುವರಿ ಷರತ್ತುಗಳನ್ನು ಪೂರೈಸಿರಬೇಕು.

ಮಹಿಳಾ ಸ್ವಸಹಾಯ ಗುಂಪು ಮತ್ತು ಸ್ತ್ರೀ ಶಕ್ತಿ ಗುಂಪುಗಳ ಅರ್ಹತೆಯನ್ನು ಅಧಿಕೃತ ಪ್ರಾಧಿಕಾರಿಯು ಕಲಂ 11ರ ಉಪ ಕಲಂ

| | | |
|---|---|---|
| | | (2) ರಲ್ಲಿ ವಿವರಿಸಿದ ವಿಶೇಷ ಪ್ರದೇಶಗಳಲ್ಲಿ ಸಡಿಲಗೊಳಿಸಬಹುದಾಗಿರುತ್ತದೆ.<br>13. ಖಾಸಗಿ-<br>ಎ) ವಿಕಲಚೇತನರ ವರ್ಗ Bench mark disability (ಪ್ರಾರಂಭಿಕವಾಗಿ 400 ನ್ಯಾಯಬೆಲೆ ಅಂಗಡಿಗಳು) ಮತ್ತು<br>ಬಿ) ಮಂಗಳಮುಖಿಯರ ವರ್ಗ (ಪ್ರಾರಂಭಿಕವಾಗಿ 30 ನ್ಯಾಯಬೆಲೆ ಅಂಗಡಿಗಳು)<br>ಸಿ) ಮೇಲ್ಕಂಡ ಸಹಕಾರ ಸಂಘಗಳ ಗುಣಮಟ್ಟವನ್ನು ಅವರಿಗೆ ನೀಡಲಾಗಿರುವ ಎ ಬಿ ಮತ್ತು ಸಿ ಶ್ರೇಣಿಯ ಆಡಿಟ್ ವರದಿಯನ್ನು ಪರಿಗಣಿಸಲಾಗುವುದು<br>ಡಿ) ಸದರಿ ಸಹಕಾರ ಸಂಘಗಳು 03 ವರ್ಷಗಳಿಗಿಂತ ಹಿಂದಿನವುಗಳಾಗಿರಬೇಕು ಹಾಗೂ ಕಳೆದ 2 ವರ್ಷಗಳಿಂದ ನಿರಂತರವಾಗಿ ರೂ.200000/-ದಷ್ಟು ಮೊತ್ತದ ಬ್ಯಾಂಕ್ ಬ್ಯಾಲೆನ್ಸ್ ಹೊಂದಿರಬೇಕು. |

ಆನಾಸ 08 ಆನಾಸ 2021 (ಇ-ಆಫೀಸ್)

(ಉಮೇಶ ಪಿ. ಕತ್ರಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

## Annexure to LCQ 259

| Sl. No. | Name of the District | No. of Thanda |
|---|---|---|
| 1 | Bagalkote | 8 |
| 2 | Benagluru Urban | 0 |
| 3 | Bengaluru Rural | 0 |
| 4 | Belagavi | 3 |
| 5 | Ballari | 103 |
| 6 | Bidar | 82 |
| 7 | Bijapura | 52 |
| 8 | Chamarajanagara | 4 |
| 9 | Chikkamagluru | 53 |
| 10 | Chitrdurga | 40 |
| 11 | Chikkaballapura | 23 |
| 12 | Dakshina Kannada | 0 |
| 13 | Davanagere | 20 |
| 14 | Dharwad | 6 |
| 15 | Gadag | 35 |
| 16 | Kalaburagi | 224 |
| 17 | Hassan | 7 |
| 18 | Haveri | 53 |
| 19 | Kodagu | 0 |
| 20 | Kolar | 0 |
| 21 | Koppal | 64 |
| 22 | Mandya | 0 |
| 23 | Mysore | 1 |
| 24 | Raichur | 86 |
| 25 | Ramanagar | 3 |
| 26 | Shivamogga | 2 |
| 27 | Tumskuru | 22 |
| 28 | Udupi | 0 |
| 29 | Uttar Kannada | 7 |
| 30 | Yadagiri | 116 |
| 31 | Benagaluru East | 0 |
| 32 | Bengaluru North | 0 |
| 33 | Bengaluru South | 0 |
| 34 | Benagaluru west | 0 |
| | **Total** | **1014** |